UNIVERSITY OF MYSORE
**YUVARAJA'S COLLEGE (AUTONOMOUS)**
(A Constituent College with Potential for Excellence)
(Accredited 'A' Grade With CGPA 3.34 by NAAC)
JLB Road,Mysuru-570 005

**No:YCM/UG/AD-01/ 116 /2023-24** **Date:26-04-2023**

## UG ADMISSION 2023-24

### How to apply online for Ist year B.Sc., BCA., BBA Courses

**Go to Google**

↓

**uucms.karnataka.gov.in/login**

↓

**Select New Candidate Registration**

↓

**Enter personnel details**

↓

**Upload photo and signature** (max 200kb)

↓

**Enter Category and Special category**

**(upload caste and income certificate)**

↓

**Enter Quota details**

↓

**Enter Previous Educational details**

↓

**Submit**

↓

**Take one or two copies print of filled application successfully**

26/4/23

**Principal**
Yuvaraja's College (Autonomous)
University of Mysore
MYSORE - 570 005

26/4/23 26/4/23

ಮೈಸೂರು ವಿಶ್ವವಿದ್ಯಾನಿಲಯ
# ಯುವರಾಜ ಕಾಲೇಜು
(ವಿಶ್ವವಿದ್ಯಾನಿಲಯದ ಸಾಮರ್ಥ್ಯವರ್ಧಿತ ಉತ್ಕೃಷ್ಟಜ್ಞಾನ ಸ್ವಾಯತ್ತತಾ ಕಾಲೇಜು)
(ನ್ಯಾಕ್‌ನಿಂದ ಸಿಜಿಪಿಎ 3.34 'ಎ' ಗ್ರೇಡ್ ಮಾನ್ಯತೆ ದೊರೆತಿದೆ)
ಜೆ.ಎಲ್.ಬಿ.ರಸ್ತೆ ಮೈಸೂರು-570 005.ಕರ್ನಾಟಕ ಭಾರತ

ನಂ : ಯುಕಾಮೈ/ಸ್ನಾತಕ /ಎಡಿ-01/ 116 /2023-24 **ದಿನಾಂಕ: 26-04-2023**

## ಪ್ರ ಕ ಟ ಣೆ-01

ವಿಷಯ: 2023-24ನೇ ಶೈಕ್ಷಣಿಕ ಸಾಲಿಗೆ ಪ್ರಥಮ ವರ್ಷದ ಸ್ನಾತಕ (UG) ಪ್ರೋಗ್ರಾಂಗಳಿಗೆ ಪ್ರವೇಶಾತಿಗಾಗಿ UUCMS ಮುಖಾಂತರ ವಿದ್ಯಾರ್ಥಿಗಳು Online-ನಲ್ಲಿ ಅರ್ಜಿ ಸಲ್ಲಿಸುವ ಬಗ್ಗೆ.
ಉಲ್ಲೇಖ: ಮೈಸೂರು ವಿಶ್ವವಿದ್ಯಾನಿಲಯದ ಸುತ್ತೋಲೆ ಸಂಖ್ಯೆ: ಎಸಿ4/59/2021-22,ದಿನಾಂಕ:24-04-2023

*****

ಕರ್ನಾಟಕ ಸರ್ಕಾರ ಮತ್ತು ಉಲ್ಲೇಖ ಅನ್ವಯ 2023-24ನೇ ಶೈಕ್ಷಣಿಕ ಸಾಲಿನ ಪ್ರಥಮ ಬಿ.ಎಸ್ಸಿ. / ಬಿ.ಬಿ.ಎ. / ಬಿ.ಸಿ.ಎ. ಕೋರ್ಸ್‌ಗಳಿಗೆ ರಾಷ್ಟ್ರೀಯ ಶಿಕ್ಷಣ ನೀತಿ (NEP) 2020ರ ಅನುಸಾರ ಪ್ರವೇಶಾತಿಗೆ ಅರ್ಹ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ ಇಲಾಖೆಯಿಂದ ಕಲ್ಪಿಸಿರುವ UUCMS ನಲ್ಲಿ ಕಡ್ಡಯವಾಗಿ https://uucms.karnataka.gov.in ಈ ವೆಬ್‌ಸೈಟ್‌ನ ಮೂಲಕ Admission Portal ತೆರೆಯಲಾಗಿದ್ದು, ಉನ್ನತ ಶಿಕ್ಷಣ ಇಲಾಖೆ ಮತ್ತು ಮೈಸೂರು ವಿಶ್ವವಿದ್ಯಾನಿಲಯದಿಂದ ತಿಳಿಸುವ ನಿಗಧಿತ ಸಮಯದೊಳಗೆ ಪ್ರವೇಶಾತಿ ಅರ್ಜಿಯನ್ನು ಸಲ್ಲಿಸತಕ್ಕದ್ದು. ಸಲ್ಲಿಸಿದ ಅರ್ಜಿಗಳನ್ನು ವಿದ್ಯಾರ್ಥಿಗಳು ಒಂದು ಸೆಟ್ ಪ್ರಿಂಟ್ ತೆಗೆದುಕೊಂಡು ಪ್ರವೇಶಾತಿ ಸಮಯದಲ್ಲಿ ಕಾಲೇಜಿಗೆ ಸಲ್ಲಿಸಬೇಕು.

**ವಿದ್ಯಾರ್ಥಿಗಳು ಈ ಕೆಳಕಂಡ ಅಂಶಗಳ ಬಗ್ಗೆ ಕ್ರಮವಹಿಸುವುದು**

1. ವಿದ್ಯಾರ್ಥಿಗಳು ತಮ್ಮ ಮೂಲ ದಾಖಲಾತಿಗಳಾದ SSLC, 2nd PUC, Valid Caste Certificate, Valid Income Certificate, Aadhar Card, Student Bank Account Pass Book Front Sheet ಮತ್ತು Student Photo and Signature ಅನ್ನು Scanned Soft Copy ಗಳಾಗಿ Save ಮಾಡಿಕೊಳ್ಳಬೇಕು.

2. ಕಾಲೇಜಿನಲ್ಲಿರುವ ಬಿ.ಎಸ್ಸಿ. ಕೋರ್ಸಿನ ಐಚ್ಛಿಕ ವಿಷಯಗಳ ಮತ್ತು ಇನ್ನಿತರೆ ಯಾವುದೇ ವಿಷಯಗಳ/ಪ್ರಕಟಣೆ ಬಗ್ಗೆ ತಿಳಿದು ಕೊಳ್ಳಲು ಕಾಲೇಜಿನ http://ycm.uni-mysore.ac.in ಈ ವೆಬ್‌ಸೈಟ್‌ನ ಮೂಲಕ ತಿಳಿದುಕೋಳ್ಳಬಹುದು.

3. 2023-24ನೇ ಶೈಕ್ಷಣಿಕ ಸಾಲಿನ ಪ್ರಥಮ ಬಿ.ಎಸ್ಸಿ / ಬಿಬಿಎ / ಬಿ.ಸಿ.ಎ ಮತ್ತು ಬಿ.ಎಸ್ಸಿ ಇನ್ Clinical Nutrition and Dietaries ಪದವಿ ಕೋರ್ಸ್‌ಗಳ ಪ್ರವೇಶಾತಿ ಶುಲ್ಕದ ವಿವರದ ಪಟ್ಟಿಯನ್ನು ಶೀಘ್ರದಲ್ಲಿ ಕಾಲೇಜಿನ **ycm.uni-mysore.ac.in** ವೆಬ್‌ಸೈಟಿನಲ್ಲಿ ಪ್ರಕಟಿಸಲಾಗುವುದು

4. ಬಿ.ಎಸ್ಸಿ. ಬಿ.ಸಿ.ಎ ಮತ್ತು ಬಿ.ಬಿ.ಎ ಕೋರ್ಸಿಗೆ ಅರ್ಜಿ ಪಡೆಯಲು ದ್ವಿತೀಯ ಪಿ.ಯು.ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.

5. ವಿದ್ಯಾರ್ಥಿಗಳು NEP ಹಾಗೂ ಕಾಲೇಜಿನ ನಿಯಮಾವಳಿಗಳನ್ನು ಕಾಲೇಜಿನ ಸೂಚನಾಫಲಕ/ ವೆಬ್‌ಸೈಟ್/ಅಂತರ್ಜಾಲದಲ್ಲಿ ಕಡ್ಡಾಯವಾಗಿ ತಿಳಿದುಕೊಳ್ಳಬೇಕಾಗಿ ತಿಳಿಸಲಾಗಿದೆ.

6. ವಿದ್ಯಾರ್ಥಿಗಳು UUCMS- Admission Portal ನಲ್ಲಿ ಯುವರಾಜ ಕಾಲೇಜಿಗೆ ಅರ್ಜಿ ಸಲ್ಲಿಸುವಾಗ ಅಂತಿಮ ಅಂತದಲ್ಲಿ Submit button ಒತ್ತುವಾಗ ಎಲ್ಲಾ ಅಂಶಗಳು ಸರಿ ಇದೆಯೇ ಎಂದು ಪರಿಕ್ಷಿಸುವುದು ಸೂಕ್ತ. ಅರ್ಜಿ ಸಲ್ಲಿಸಿದ ನಂತರ ಯಾವುದೇ ಬದಲಾವಣೆಗೆ ಅಥವಾ ತಿದ್ದುಪಡಿಗೆ ಅವಕಾಶವಿರುವುದಿಲ್ಲ.

7. ಯುವರಾಜ ಕಾಲೇಜಿಗೆ 2023-24ನೇ ಶೈಕ್ಷಣಿಕ ಸಾಲಿನ ಸ್ನಾತಕ ಪದವಿ ಪ್ರವೇಶಾತಿ ಅರ್ಜಿ ಸಲ್ಲಿಸುವಾಗ ಈ ಕೆಳಕಂಡ ವಿದ್ಯಾರ್ಹತೆ ಹೊಂದಿರಬೇಕು.

| ಕ್ರಮ. ಸಂಖ್ಯೆ | ವಿಷಯ | ಪದವಿ | ವಿದ್ಯಾರ್ಹತೆ |
|---|---|---|---|
| ೧ | ಬಿ.ಎಸ್ಸಿ. | ರಾಷ್ಟ್ರೀಯ ಶಿಕ್ಷಣ ನೀತಿ (NEP) 2020ರ ಅನುಸಾರ | ವಿದ್ಯಾರ್ಥಿಯು ಎರಡು ವರ್ಷದ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ವಿಜ್ಞಾನ ವಿಷಯವನ್ನು ತೆಗೆದುಕೊಂಡು, ಪಿಯುಸಿ ರಾಜ್ಯ ಸರ್ಕಾರದ ಕೇಂದ್ರ ಕಛೇರಿಯಿಂದ ಪದವಿಗೆ ಸೇರಲು ಅರ್ಹತಾ ಪ್ರಮಾಣ ಪತ್ರವನ್ನು (ಅಂಕಪಟ್ಟಿ) ಪಡೆದಿರಬೇಕು. ಅಂತಹವರು ಬಿ.ಎಸ್ಸಿ. ಪದವಿಗೆ ಸೇರಲು ಅರ್ಹರಾಗಿರುತ್ತಾರೆ. |
| ೨ | ಬಿ.ಸಿ.ಎ. | ರಾಷ್ಟ್ರೀಯ ಶಿಕ್ಷಣ ನೀತಿ (NEP) 2020ರ ಅನುಸಾರ | ದ್ವಿತೀಯ ಪಿಯುಸಿಯಲ್ಲಿ ತೇರ್ಗಡೆಯಾದ, ಅರ್ಹ ವಿದ್ಯಾರ್ಥಿಗಳು ವಿಜ್ಞಾನ ವಿಷಯವನ್ನು ಮತ್ತು ವಾಣಿಜ್ಯ ವಿಭಾಗದಲ್ಲಿ ಗಣಕ ವಿಜ್ಞಾನ ವನ್ನು ಓದಿರಲೆಬೇಕು ಅಂತಹವರು ಬಿ.ಸಿ.ಎ ಪದವಿ ಸೇರಲು ಅರ್ಹರಾಗಿರುತ್ತಾರೆ. |
| ೩ | ಬಿ.ಬಿ.ಎ. | ರಾಷ್ಟ್ರೀಯ ಶಿಕ್ಷಣ ನೀತಿ (NEP) 2020ರ ಅನುಸಾರ | ಎರಡು ವರ್ಷದ ದ್ವಿತೀಯ ಪಿಯುಸಿಯಲ್ಲಿ ತೇರ್ಗಡೆಯಾದ ಎಲ್ಲಾ (Science, Commerce & Arts) ವಿದ್ಯಾರ್ಥಿಗಳು ಈ ಪದವಿಗೆ ಸೇರಲು ಅರ್ಹರಾಗಿರುತ್ತಾರೆ. |
| ೪. | ಬಿ.ಎಸ್ಸಿ. ಇನ್ Clinical Nutrition and Dietaries | ರಾಷ್ಟ್ರೀಯ ಶಿಕ್ಷಣ ನೀತಿ (NEP) 2020ರ ಅನುಸಾರ | ವಿದ್ಯಾರ್ಥಿಯು ಎರಡು ವರ್ಷದ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ PCMB ಯನ್ನು ತೆಗೆದುಕೊಂಡು, ಪಿಯುಸಿ ರಾಜ್ಯ ಸರ್ಕಾರದ ಕೇಂದ್ರ ಕಛೇರಿಯಿಂದ ಪದವಿಗೆ ಸೇರಲು ಅರ್ಹತಾ ಪ್ರಮಾಣ ಪತ್ರವನ್ನು (ಅಂಕಪಟ್ಟಿ) ಪಡೆದಿರಬೇಕು. ಅಂತಹವರು ಬಿ.ಎಸ್ಸಿ. ಪದವಿಗೆ ಸೇರಲು ಅರ್ಹರಾಗಿರುತ್ತಾರೆ. |

**ELIGIBILITY FOR UNDER GRADUATE DEGREE COURSES IN YCM DURING THE ACADEMIC YEAR 2023-24**

| Sl. No. | Course | Eligibility |
|---|---|---|
| 1 | B.Sc.<br>UNDER NATIONAL EDUCATIONAL POLICY (NEP) SCHEME | A candidate who has passed the Two-year Pre-University Examination in Science subjects conducted by the Pre-University Board of Education in the State of Karnataka or any other examination considered equivalent by the College/University, is eligible for admission to the B.Sc. course. |
| 2 | B.C.A.<br>UNDER NATIONAL EDUCATIONAL POLICY (NEP) SCHEME | All those candidates who have successfully completed 10+2 or PUC or equivalent are eligible for admission. However, all such candidates should have studied Science as a subject in PUC and also PUC Commerce in computer Science. |
| 3 | B.B.A.<br>UNDER NATIONAL EDUCATIONAL POLICY (NEP) SCHEME | Science, Commerce & Arts Candidates a who have passed the Two-year Pre- University Examination are eligible for admission to BBA course |
| 4 | B.Sc. in Clinical Nutrition and Dietaries<br>UNDER NATIONAL EDUCATIONAL POLICY (NEP) SCHEME | PCMB Science Candidates a who have passed the Two-year Pre-University Examination are eligible for admission to this course |

8. ಯಾವುದೇ ಮಾಹಿತಿಗಾಗಿ ಕಾಲೇಜ ಕಛೇರಿ ದೂರವಾಣಿ ಸಂಖ್ಯೆ: 0821–2419292 ಮೂಲಕ ಅಥವಾ ನೇರವಾಗಿ ಬಂದು ಮಾಹಿತಿಗಳನ್ನು ಪಡೆಯಬಹುದು.

9. **Core Subject Wise available in B.Sc. Course**

| Sl. No | B.Sc. in Core Subject | Remarks |
|---|---|---|
| 1 | Physics, Mathematics | |
| 2 | Physics, Electronics | |
| 3 | Physics, Geology | |
| 4 | Physics, Chemistry | |
| 5 | Statistics, Mathematics | |
| 6 | Mathematics, Chemistry | |
| 7 | Computer Science, Mathematics | |
| 8 | Chemistry, Geology | |
| 9 | Chemistry, Environmental Science | |
| 10 | Chemistry, Botany | |
| 11 | Chemistry, Zoology | |
| 12 | Botany, Zoology | |
| 13 | Biochemistry, Food Science & Nutrition | |
| 14 | Zoology, Sericulture | |
| 15 | Sericulture, Biotechnology | |
| 16 | Biochemistry, Zoology | |
| 17 | Botany, Biochemistry | |
| 18 | Biochemistry, Microbiology | |
| 19 | Microbiology, Biotechnology | |
| 20 | Chemistry, Microbiology | |
| 21 | Botany, Microbiology | |
| 22 | Chemistry, Biotechnology | |
| 23 | Botany, Biotechnology | |
| 24 | Sericulture, Chemistry | |
| 25 | Earth Science, Environmental Science | |
| 26 | Earth Science, Computer Science | |
| 27 | Electronics, Mathematics | |
| 28 | Library and Information Science & Statistics | |
| 29* | Statistics and Computer Science | |
| 30* | Zoology and Microbiology | |
| 31* | Electronics and Computer Science | |

| Sl. No | Course | Remarks |
|---|---|---|
| 1 | BCA | |
| 2 | BBA | |
| 3 | B.Sc. in Clinical Nutrition and Dietaries | |

10. ವಿದ್ಯಾರ್ಥಿಗಳು UUCMS- Admission Portal ಅರ್ಜಿ ಸಲ್ಲಿಸುವಾಗ ಯಾವುದೇ ತಾಂತ್ರಿಕ ದೋಷ (Example: Application Error ) ಬಂದರೆ ಈ ಕೆಳಕಂಡ ದೂರವಾಣಿಗೆ ಸಂಪರ್ಕ ಮಾಡಬಹುದು.

**UUCMS Help Line Phone Number : 9980545991 / 8497025839 / 9353497697 /9964306346 /9448207157**

**Timings:** 10 AM to 6 PM (On all Govt. working days)

**Email:** uucms.helpdesk@gmail.com

## ಎಲ್ಲಾ ವಿದ್ಯಾರ್ಥಿಗಳಿಗೆ ಕಾಲೇಜಿನ ಶಿಸ್ತಿಗೆ ಸಂಬಂಧಿಸಿರುವ ನಿಯಮಗಳು

- ಈ ಕಾಲೇಜಿಗೆ ಸೇರುವ ಎಲ್ಲಾ ವಿದ್ಯಾರ್ಥಿ/ವಿದ್ಯಾರ್ಥಿನಿಯರನ್ನು ಪ್ರೌಢರು, ಹೊಣೆಗಾರಿಕೆ ಅರಿತವರೆಂದು ಪರಿಗಣಿಸಲಾಗುತ್ತದೆ ಮತ್ತು ಅವರೆಲ್ಲರೂ ಎಲ್ಲಾ ವಿಚಾರದಲ್ಲಿ ಸಭ್ಯತೆಯಿಂದ ವರ್ತಿಸುತ್ತಾರೆಂಬುದನ್ನು ನಿರೀಕ್ಷಿಸಲಾಗುತ್ತದೆ.
- ವಿದ್ಯಾರ್ಥಿ/ವಿದ್ಯಾರ್ಥಿನಿಯರು ವಿಶ್ವವಿದ್ಯಾನಿಲಯ/ಕಾಲೇಜು, ಕಾಲಕಾಲಕ್ಕೆ ರೂಪಿಸಿ, ಪ್ರಕಟಿಸುವ ನಿಯಮ ನಿಬಂಧನೆಗಳಿಗೆ ಬದ್ಧರಾಗಿ ಅವುಗಳಿಗೆ ತಕ್ಕಂತೆ ನಡೆದುಕೊಳ್ಳಬೇಕು.
- ಹಾಜರಾತಿಯನ್ನು ಕಡ್ಡಾಯಗೊಳಿಸಲಾಗಿದೆ.
- ವಿದ್ಯಾರ್ಥಿಗಳು ಅಧ್ಯಯನಕ್ಕೆ ಬೇಕಾದ ಪಠ್ಯಪುಸ್ತಕ, ಪ್ರಯೋಗಿಕ ದಾಖಲೆ ಪುಸ್ತಕ ಇತ್ಯಾದಿಗಳನ್ನು ಪ್ರತಿದಿನ ತಪ್ಪದೆ ತರತಕ್ಕದ್ದು.
- ವಿದ್ಯಾರ್ಥಿಗಳು ಕಾಲೇಜಿನಲ್ಲಿ ಶಿಕ್ಷಕರು, ಕಛೇರಿ ಹಾಗೂ ಗ್ರಂಥಾಲಯದ ಸಿಬ್ಬಂದಿ, ಸಹಪಾಠಿ ಹಾಗೂ ಸಾರ್ವಜನಿಕರ ವಿಷಯದಲ್ಲಿ ನಮ್ರತೆಯಿಂದ ಹಾಗೂ ಸಭ್ಯತೆಯಿಂದ ನಡೆದುಕೊಳ್ಳಬೇಕು.
- ಕಾಲೇಜಿನ ಆವರಣ, ಗ್ರಂಥಾಲಯ, ವಾಚನಾಲಯ, ಮೊಗಸಾಲೆ, ಪ್ರಯೋಗಶಾಲೆ ಮತ್ತು ತರಗತಿ ಕೊಠಡಿಗಳನ್ನು ಮತ್ತು ಕಾಲೇಜಿನ ಆಸ್ತಿಪಾಸ್ತಿಗಳನ್ನೂ ರಕ್ಷಣೆ ಮಾಡಬೇಕು ಹಾಗೂ ಕಾಲೇಜಿನ ಆವರಣದಲ್ಲಿ ನಿಃಶಬ್ದತೆ ಮತ್ತು ಶುದ್ಧತೆ ಕಾಪಾಡಬೇಕು.
- ಕಾಲೇಜಿನ ಆವರಣದಲ್ಲಿ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ಧರಿಸಬೇಕು.
- ರ್‍ಯಾಗಿಂಗ್ ಮತ್ತು ಅಶಿಸ್ತಿನ ಗಂಭೀರ ಚಟುವಟಿಕೆಗಳನ್ನು ತೀವ್ರವಾದ ಅಪರಾಧಗಳನ್ನಾಗಿ ಪರಿಗಣಿಸಿ ಬಿಗಿಯಾದ ಕ್ರಮಗಳನ್ನು ಜರುಗಿಸಲಾಗುವುದು.
- ಕಾಲೇಜಿನಲ್ಲಿ ಹೊರಡಿಸುವ ಪ್ರಕಟಣೆಗಳಿಗೆ ಸಂಬಂಧಿಸಿದಂತೆ ಕಾಲೇಜಿನ ಅಥವಾ ಇಲಾಖೆಗಳ ಪ್ರಕಟಣಾ ಫಲಕವನ್ನು ಪ್ರತಿದಿನವೂ ತಪ್ಪದೆ ನೋಡಬೇಕಾದುದು ಪ್ರತಿ ವಿದ್ಯಾರ್ಥಿ/ವಿದ್ಯಾರ್ಥಿನಿಯ ಹೊಣೆಗಾರಿಕೆ.
- ಸೂಕ್ತ ಮಾರ್ಗದರ್ಶನಕ್ಕಾಗಿ ವಿದ್ಯಾರ್ಥಿ/ವಿದ್ಯಾರ್ಥಿನಿಯರು ವಿದ್ಯಾರ್ಥಿ ಕ್ಷೇಮಪಾಲನಾಧಿಕಾರಿಯನ್ನು ಸಂಪರ್ಕಿಸಿ ಅವರಿಂದ ಸೂಕ್ತ ಮಾರ್ಗದರ್ಶನ ಪಡೆಯಬಹುದು.
- ವಿದ್ಯಾರ್ಥಿ/ವಿದ್ಯಾರ್ಥಿನಿಯರ ತಂದೆ ತಾಯಂದಿರು ತಮ್ಮ ಮಕ್ಕಳ ಶ್ರೇಯೋಭಿವೃದ್ಧಿಯನ್ನು ತಿಳಿಯಲು ಆಗಿಂದಾಗ್ಗೆ ಪ್ರಾಂಶುಪಾಲರನ್ನು ಹಾಗೂ ಸಂಬಂಧಪಟ್ಟ ಶಿಕ್ಷಕರನ್ನು ಭೇಟಿ ಮಾಡತಕ್ಕದ್ದು.
- ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳು ತಮಗೆ ನೀಡಿದ ಕೊಠಡಿಯಲ್ಲಿ ಇತರೆ ಅನಧಿಕೃತ ವ್ಯಕ್ತಿಗಳನ್ನು ಇರಿಸಿ ಕೊಂಡಿರುವುದು ಕಂಡು ಬಂದಲ್ಲಿ ಅಂತಹ ವಿದ್ಯಾರ್ಥಿ/ವಿದ್ಯಾರ್ಥಿನಿಯರ ಕಾಲೇಜು ಪ್ರವೇಶಾತಿಯನ್ನು ಕೂಡಲೆ ರದ್ದುಪಡಿಸಲಾಗುವುದು.
- ಕಾಲೇಜಿನ ತರಗತಿಗಳಲ್ಲಿ, ಕಛೇರಿ ಹಾಗೂ ಆವರಣದಲ್ಲಿ ಮೊಬೈಲ್ ಬಳಕೆ ನಿಷಿದ್ಧವಾಗಿರುತ್ತದೆ. ನಿಯಮ ಮೀರಿದವರನ್ನು ಶಿಕ್ಷೆಗೆ ಗುರಿಪಡಿಸಿಲಾಗುವುದು.
- ಕಾಲೇಜಿನ ಆವರಣದಲ್ಲಿ ಧೂಮಪಾನ,ಮಾದಕ ಪದಾರ್ಥಗಳ ಸೇವನೆ ಸಂಪೂರ್ಣ ನಿಷೇಧಿಸಲಾಗಿದೆ.ಇದರ ಬಳಕೆ ಶಿಕ್ಷಾರ್ಹ ಅಪರಾಧ.
- ವಿದ್ಯಾರ್ಥಿಗಳು ಸೂಕ್ತ ಶುಲ್ಕ ನೀಡಿ ಒಮ್ಮೆ ಪ್ರವೇಶಾತಿಯಾದ ನಂತರ,ಯಾವುದಾದರೂ ಕಾರಣದಿಂದ ತಮ್ಮ ಪ್ರವೇಶಾತಿಯನ್ನು ರದ್ದುಮಾಡಿಸಿಕೊಂಡಲ್ಲಿ, ಅಂತಹ ವಿದ್ಯಾರ್ಥಿಗಳು ಪ್ರವೇಶಾತಿ ಸಮಯದಲ್ಲಿ ಪಾವತಿಸಿರುವ ಹಣವನ್ನೂ ಹಿಂತಿರುಗಿಸಲಾಗುವುದಿಲ್ಲ.

26/4/23

ಪ್ರಾಂಶುಪಾಲರು
ಯುವರಾಜ ಕಾಲೇಜು (ಸ್ವಾಯತ್ತ)
ಮೈಸೂರು ವಿಶ್ವವಿದ್ಯಾನಿಲಯ